# ಶ್ರೀಮಾತೆ ಮತ್ತು ಭಾರತೀಯ ನಾರಿಯರ ಆದರ್ಶ

ವಿಜಯ ಭಾರತಿ

*ಸಾಂಪ್ರದಾಯಿಕ ಬಾಳಿನೊಂದಿಗೆ ಆಧುನಿಕ ದೃಷ್ಟಿಕೋನವನ್ನು ಮೈಗೂಡಿಸಿಕೊಂಡಿದ್ದ ಶ್ರೀಮಾತೆಯವರು ಭಾರತೀಯ ನಾರಿಯರಿಗೆ ಒಂದು ಉಜ್ವಲ ಆದರ್ಶವಾಗಿ ನಿಂತಿದ್ದಾರೆ ಎಂಬುವದನ್ನು ಸೋದಾಹರಣವಾಗಿ ವ್ಯಕ್ತಪಡಿಸಿದ್ದಾರೆ ಶ್ರೀಮತಿ ವಿಜಯ ಭಾರತಿಯವರು. ಹಲವಾರು ಲೇಖನ ಉಪನ್ಯಾಸಗಳ ಮೂಲಕ ಕರ್ನಾಟಕದ ಶ್ರೀರಾಮಕೃಷ್ಣ ಭಕ್ತವೃಂದಕ್ಕೆ ಚಿರಪರಿಚಿತರಾಗಿರುವ ವಿಜಯ ಭಾರತಿಯವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.*

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ ॥

ಮಹಾಕವಿ ಕಾಳಿದಾಸನ ಈ ಶ್ಲೋಕ ಶಿವಶಕ್ತಿತತ್ತ್ವದ ಮೂಲಕ ಸ್ತ್ರೀಪುರುಷ ಸ್ವರೂಪದ ಶ್ರೇಷ್ಠತೆಯಲ್ಲಿ ಕಾಣುವ ಪರಸ್ಪರ ಪೂರಕಭಾವವನ್ನು ಎತ್ತಿಹಿಡಿದಿದೆ. ವಾಕ್ ಇದ್ದಲ್ಲಿ ಅರ್ಥ, ಅರ್ಥವಿದ್ದಲ್ಲಿ ವಾಕ್. ಅರ್ಥವಿಲ್ಲದ ವಾಕ್ ಬರಿಯ ಧ್ವನಿಯಾಗಿ ಕೇಳುವವರ ಬುದ್ಧಿಮನಗಳನ್ನು ಮುಟ್ಟಲಾರದು; ಅಲ್ಲದೆ ಮನದ ಇಂಗಿತವನ್ನು ಮಾತಿನ ನೆರವಿಲ್ಲದೆ ತಿಳಿಸಲಾಗದು. ಮಾತು ಅರ್ಥ ಎಂದೂ ಜೊತೆಜೊತೆಯಾಗಿಯೇ ಸಾಗುತ್ತವೆ, ಅರ್ಧನಾರೀಶ್ವರ ಸ್ವರೂಪದಂತೆ. ವಿಶ್ವ ಚೈತನ್ಯದ ಈ ಯುಗಳ ಸ್ವರೂಪ ಸೃಷ್ಟಿಯಲ್ಲಿ ಹಾಸುಹೊಕ್ಕಾಗಿ ವ್ಯಾಪಿಸಿದೆ.

ಧಾರಿಣಿಯಾಗಿ, ಪಾಲಿನಿಯಾಗಿ, ತಾರಿಣಿಯಾಗಿ ಮತ್ತು ಮೂಲ ಸಂಚಾಲನ ಶಕ್ತಿಯಾಗಿ ಸ್ತ್ರೀಯ ಪಾತ್ರ ಮಾನವಲೋಕದಲ್ಲಿ ಗುರುತರವಾದದ್ದು. ನಾರೀತ್ವದ ಹಿರಿಮೆ-ಗರಿಮೆಗಳನ್ನು ಮಹಿಳೆ ಮರೆತರೆ ಇಲ್ಲವೆ ಪುರುಷನಾದವನು ಅದನ್ನು ಗುರುತಿಸಲಾಗದೆ ಹೋದರೆ ಬದುಕಿನ ಗಾಡಿ ಏರುಪೇರಾಗುತ್ತದೆ. ಸಮಾನ ಭಾವದಲ್ಲಿ ಸಮಾನ ಸ್ನೇಹದಲ್ಲಿ, ಸಮತೋಲನದಲ್ಲಿ ಇಬ್ಬರ ಬದುಕೂ ಸಾಗಿದ್ದಾದರೆ ಆಗ ಇಬ್ಬರ ಬಾಳೂ ನಲಿವು-ನೆಮ್ಮದಿಗಳ ಮೂಲಸೆಲೆಯಾಗುತ್ತದೆ. ಮಾನವೀಯತೆಯನ್ನು ಪೂರ್ಣವಾಗಿ ಅರಳಿಸಿಕೊಂಡು ದೈವಿಕತೆಯ ಸುಗಂಧಸೂಸುವ ಒಪ್ಪವಾದ ಜೀವನವನ್ನು ಬಾಳುತ್ತಿರುವವನೇ ಆದರ್ಶ ಮಾನವ. ಅಂತಹ ಮಾನವ ಜನಾಂಗಕ್ಕೆ ಜನ್ಮಕೊಟ್ಟು, ಅವರನ್ನು ಒಪ್ಪ-ಓರಣಗಳಿಂದ ತಿದ್ದಿ ತೀಡಿ ಉತ್ಕೃಷ್ಟವಾದ ಆಕಾರವನ್ನು ನೀಡುವವಳು ಆದರ್ಶ ಸ್ತ್ರೀ. ಆದ್ದರಿಂದ ಎಲ್ಲಿ ಆದರ್ಶ ಸ್ತ್ರೀ ಇಲ್ಲವೋ ಅಲ್ಲಿ ಆದರ್ಶ ಮಾನವ ಸಮಾಜವೂ ಇಲ್ಲ. ತಾಯಿಬೇರು ಬಲವಾಗಿದ್ದರೆ ಮರ ಹಚ್ಚ ಹಸಿರಾಗಿದ್ದು ಹೂಹಣ್ಣುಗಳನ್ನು ಸಮೃದ್ಧಿಯಾಗಿ ನೀಡುತ್ತದೆ. ಭಾರತೀಯ ನಾರಿ ಇಂತಹ ಸದೃಢ ತಾಯಿಬೇರಾಗಿ ಬಾಳಿದವಳು, ಬಾಳುತ್ತಿರುವವಳು.



ಸನಾತನಧರ್ಮದ ಹಾದಿಯಲ್ಲಿ ಭಾರತೀಯ ಮಹಿಳೆ ನಡೆದುಬಂದ ದಾರಿಯನ್ನು ಗಮನಿಸಿದರೆ ಆ ಹಾದಿಯಲ್ಲಿ ಏರಿಳಿತಗಳು ಕಾಣಬರುತ್ತವೆ. ವೇದಕಾಲದಲ್ಲಿ ಅವಳ ಆಧ್ಯಾತ್ಮಿಕ ಮತ್ತು ಸಾಮಾಜಿಕ ನೆಲೆಗಟ್ಟು ಸಾಕಷ್ಟು ಒಳ್ಳೆಯ ನಿಲುವಿನಲ್ಲಿಯೇ ಇತ್ತು. ಶ್ರೇಷ್ಠ ವನಿತೆಯರಾದ ಅಪಾಲ, ವಾಗಂಭೃಣೆ, ಶಾಶ್ವತೀ, ಗಾರ್ಗೀ, ಮೈತ್ರೇಯೀ ಮೊದಲಾದವರು ಇಂದಿಗೂ ಪುಣ್ಯಸ್ಮರಣೀಯರೇ ಆಗಿದ್ದಾರೆ. ಆಗಿನ ದಿನಗಳಲ್ಲಿ ಶೋಷಣೆ-ಘರ್ಷಣೆಗಳು ಏಳುಬೀಳುಗಳು ಇರಲೇ ಇಲ್ಲವೆಂದಲ್ಲ. ಇದ್ದರೂ ಅವೆಲ್ಲವನ್ನೂ ತನ್ನ ವಿವೇಕದಿಂದ ಎದುರಿಸಿ ನಿಲ್ಲುವ ಸಾಮರ್ಥ್ಯ ವೇದಕಾಲೀನ ವನಿತೆಯಲ್ಲಿತ್ತು. ಸ್ಮೃತಿಗಳ ಕಾಲಕ್ಕೆ ಅವಳ ಉನ್ನತಿ ಸ್ವಲ್ಪಮಟ್ಟಿಗೆ ಕುಂಠಿತವಾಯಿತು.

ಇಸ್ಲಾಂ ಜನಾಂಗದವರ ಧಾಳಿ, ಮತ್ತು ಆಂಗ್ಲರ ಆಕ್ರಮಣ ಇವುಗಳಿಂದ ಹಿಂದೂಧರ್ಮ ಸುಮಾರು ಒಂದು ಸಾವಿರ ವರ್ಷಕಾಲ ಅನ್ಯಧರ್ಮದ ಪ್ರಭುತ್ವಕ್ಕೆ ಒಳಗಾಗಿ ಮಹಿಳೆಯ ವ್ಯಕ್ತಿತ್ವ ನಲುಗಿತು. ಅವಳದೇ ಆದ ಅಸ್ತಿತ್ವ ಅವಳಿಗೆ ಕಾಣದೆ ಹೋಯಿತು. ಇಂತಹ ವಿಷಮ ಸ್ಥಿತಿಯಲ್ಲಿ ಭರವಸೆಯ ನಸುಬೆಳಕಾಗಿ ಬಂದವರು ರಾಜಾರಾಮ್ ಮೋಹನ್‌ರಾಯ್, ಕೇಶವ ಚಂದ್ರಸೇನ, ಈಶ್ವರಚಂದ್ರ ವಿದ್ಯಾಸಾಗರ ಮೊದಲಾದವರು. ಮುಂದೆ ರಾಮಕೃಷ್ಣ ಶಕ್ತಿತರಂಗದ ಗಟ್ಟಿ ಅಡಿಪಾಯದಲ್ಲಿ ಮಹಿಳೆಯ ಭವಿಷ್ಯ ಹೆಚ್ಚು ಭದ್ರವಾಯಿತು.

ಸ್ತ್ರೀತ್ವದ ಔನ್ನತ್ಯದ ಪುನರುಜ್ಜೀವನದ ದಿಶೆಯಲ್ಲಿ ರಾಮಕೃಷ್ಣರು ಇಟ್ಟ ಮೊದಲ ಹೆಜ್ಜೆ ಎಂದರೆ ಒಬ್ಬ ಸ್ತ್ರೀಯನ್ನು ಗುರುವಾಗಿ ಸ್ವೀಕರಿಸಿದ್ದು. ಸಾಧನೆಯ ಮೊದಲ ಹಂತದಲ್ಲಿಯೇ ಅವರು ಭೈರವಿ ಬ್ರಾಹ್ಮಣಿ ಎಂಬ ಮಹಾಯೋಗಿನಿಯ ಮಾರ್ಗದರ್ಶನದಲ್ಲಿ ತಂತ್ರಸಾಧನೆಯನ್ನು ಕೈಗೊಂಡು ಸಿದ್ಧಿ ಪಡೆದರು. ಭೈರವಿ ಬ್ರಾಹ್ಮಣಿ ಕೇವಲ ಗುರುವಾಗಿ ಮಾತ್ರ ಬಂದವಳಲ್ಲ— ಅವರು ಅವತಾರ ವರಿಷ್ಠರೆಂದೂ, ಅವರ ಭಾವ ಮಹಾಭಾವವೆಂದೂ ವಿದ್ವತ್ಸಭೆಯಲ್ಲಿ ವಿದ್ವತ್ಪೂರ್ಣವಾಗಿ ಘೋಷಿಸಿದವಳು, ಪ್ರಮಾಣೀಕರಿಸಿದವಳು. ಬೃಹದಾರಣ್ಯಕ ಉಪನಿಷತ್ತಿನ ಬ್ರಹ್ಮವಾದಿನಿ ಗಾರ್ಗಿಯನ್ನು ಇವಳು ನೆನಪಿಗೆ ತರುತ್ತಾಳೆ. ಏಕೆಂದರೆ ಮಹರ್ಷಿ ಯಾಜ್ಞವಲ್ಕ್ಯರನ್ನು ಜನಕರಾಜನ ವಿದ್ವತ್ ಸಭೆಯಲ್ಲಿ ಬ್ರಹ್ಮರ್ಷಿ ಎಂದು ಮೊಟ್ಟಮೊದಲಿಗೆ ಗುರುತಿಸಿದವಳು ಗಾರ್ಗಿ. ವಿಶ್ವದ ಧಾರ್ಮಿಕ ಇತಿಹಾಸದಲ್ಲಿ ಖ್ಯಾತರಾದ ಯಾರೂ ಹೀಗೆ ಒಬ್ಬ ಯೋಗಿನಿಯನ್ನು ಗುರುವಾಗಿ ಸ್ವೀಕರಿಸಿದವರು ತೀರ ವಿರಳ ಅಥವಾ ಇಲ್ಲವೇ ಇಲ್ಲ ಎಂದರೂ ತಪ್ಪಾಗಲಾರದು. ಶ್ರೀರಾಮಕೃಷ್ಣರ ನಿಮಿತ್ತದಿಂದ ಅಧ್ಯಾತ್ಮ ಕ್ಷೇತ್ರದ ಉತ್ಕೃಷ್ಟ ಯೋಗಿನಿಯೊಬ್ಬಳನ್ನು ಲೋಕ ಕಾಣುವಂತಾಯಿತು.

ಎರಡನೆಯ ಹೊಸ ತಿರುವು ಅವರ ಸಹಧರ್ಮಿಣಿ ಶ್ರೀಶಾರದಾದೇವಿಯವರಲ್ಲಿ ಆದ್ಯಾಶಕ್ತಿಯ ಸ್ವರೂಪವನ್ನು ಕಂಡು ಆದರಿಸಿದ್ದು, ಪೂಜಿಸಿದ್ದು ಎನ್ನಬಹುದು. "ಸ್ತ್ರೀಯರಲ್ಲಿ ಮಾತೃತ್ವವನ್ನು ಕಾಣುವುದೇ ಅಧ್ಯಾತ್ಮ ಸಾಧನೆಯ ಕೊನೆಯ ಮಾತು" ಎಂಬುದಾಗಿ ರಾಮಕೃಷ್ಣರು ಯಾವಾಗಲೂ ಹೇಳುತ್ತಿದ್ದರು. ಅದರಂತೆ ಆಚರಿಸಿದರು. ಕನ್ನಡದ ವರಕವಿ ಬೇಂದ್ರೆ ಶಾರದಾಮಣಿಯ ಎತ್ತರ ಕಾಂಚನಗಂಗಾ ಶಿಖರದಂತಾದರೆ ಶ್ರೀರಾಮಕೃಷ್ಣರದು ಗೌರೀಶಂಕರದ ಎತ್ತರ ಎನ್ನುತ್ತಾರೆ. "ಹೆಣ್ಣೆಂಬುದು ತಾಯಿ ಎಂಬುದು ಎರಡಲ್ಲ ಒಂದೇ" ಎಂದೂ ಹೇಳಿದ್ದಾರೆ.

> **ಯಾರ ವಿಷಯವಾಗಿ ಬೇಕಾದರೂ ಮಾತನಾಡು. ಆದರೆ ಶ್ರೀಮಾತೆಯವರ ಬಗ್ಗೆ ಹೇಳುವಾಗ ಮಾತ್ರ ಬಹಳ ಎಚ್ಚರಿಕೆಯಿಂದಿರು.... ಶ್ರೀಮಾತೆಯವರ ಘನತೆಯನ್ನು ಎಲ್ಲಿ ಹಗುರವಾಗಿಸುತ್ತೇನೋ ಎಂಬ ಭಯದಿಂದಲೇ ಅವರ ಬಗ್ಗೆ ಮಾತನಾಡಲು ಹಿಂಜರಿಯುತ್ತೇನೆ.** — ***ಮಹೇಂದ್ರನಾಥ ದತ್ತ***
> ***(ಸ್ವಾಮಿ ವಿವೇಕಾನಂದರ ಸೋದರ)***

ಅಧ್ಯಾತ್ಮಕ್ಷೇತ್ರವೂ ಉಳಿದ ಎಲ್ಲ ಕ್ಷೇತ್ರಗಳಂತೆ ಸ್ತ್ರೀಪುರುಷರಿಬ್ಬರಿಗೂ ಸಮಾನವಾದ ಕ್ಷೇತ್ರ. ಆತ್ಮಶಕ್ತಿಯ ಬೆಳವಣಿಗೆಗೆ ಅಧ್ಯಾತ್ಮಜ್ಞಾನ ಸಂಪನ್ನತೆ ಇರಬೇಕು. ಅದೇ ಮಾನವನ ಎಲ್ಲ ಬೆಳವಣಿಗೆಯ ಮೂಲಸಂಪತ್ತು, ಏಕೈಕ ಆಧಾರ ಎಂಬುದು ರಾಮಕೃಷ್ಣರ ಖಚಿತ ನಿಲುವಾಗಿತ್ತು. ಆ ನಿಲುವಿಗೆ ಪ್ರತ್ಯಕ್ಷ ಸಾಕ್ಷಿ ಅವರ ಪತ್ನಿ ಶಾರದಾದೇವಿಯವರೊಂದಿಗೆ ಅವರು ಬಾಳಿದ ರೀತಿ ಮತ್ತು ಅವರಿಗಿತ್ತ ಗೌರವಸ್ಥಾನ.

ನಿರಕ್ಷರತೆ, ಅಜ್ಞಾನ, ಬಡತನ, ಬಹುಸಂತಾನ, ಪುರುಷ ಪ್ರಭುತ್ವ ಈ ಎಲ್ಲ ಸಮಸ್ಯೆಗಳ ಸುಳಿಯಲ್ಲಿ ಅವಿದ್ಯಾವಂತ ಮಹಿಳೆ ಸಿಲುಕಿ ತೊಳಲಿದ್ದರೆ, ವಿದ್ಯೆ-ವಿವೇಕಗಳ ಸಮರಸ ಸಮ್ಮಿಶ್ರಣವಿಲ್ಲದೆ ಬದುಕಿನ ಮೌಲ್ಯಗಳನ್ನು ಸರಿಯಾಗಿ ತಿಳಿಯಲಾರದೆ ವಿದ್ಯಾವಂತ ಮಹಿಳೆ ಅರ್ಥಾತ್ ಪದವೀಧರ ಮಹಿಳೆ ಬಳಲಿದ್ದಾಳೆ. ಪಾಶ್ಚಾತ್ಯ ರೀತಿನೀತಿಗಳಲ್ಲಿ ಸತ್ವಯುತವಾದುದನ್ನು ಹೀರಿಕೊಳ್ಳದೆ ಅವುಗಳ ಥಳಕು-ಬೆಡಗುಗಳಿಗೆ ಮಾರುಹೋಗಿ ಸಮಾನತೆ-ಸ್ವಾತಂತ್ರ್ಯಗಳನ್ನು ಸೂಕ್ತರೀತಿಯಲ್ಲಿ ಅರ್ಥೈಸಲಾಗದೆ ಹೋಗಿದ್ದಾಳೆ. ಅರ್ಧಬೆಳಕು-ಅರ್ಧಕತ್ತಲೆಯಲ್ಲಿ ನಿಂತು ಅರೆ ತೆರೆದ ಕಣ್ಣಿನಿಂದ ಬದುಕನ್ನು ಅರ್ಧಮಾತ್ರ ಅವಳು ಕಾಣುವಂತಾಗಿದೆ. ಈ ಸ್ಥಿತಿಯಲ್ಲಿ ಅವಳು ಮಹತ್ತಾದುದೇನನ್ನೂ ಸಾಧಿಸಲಾರಳು. ಎಂದು ನಿಜವಾದ ವಿವೇಕೋದಯವಾಗಿ ಆತ್ಮ ವಿಶ್ವಾಸ ಮೂಡಿ, ತನ್ನ ಹಾದಿಯನ್ನು ತಾನೇ ನಿರ್ಮಿಸಿಕೊಂಡು ನಡೆಯುತ್ತಾಳೊ ಅಂದೇ ಅವಳ ಜಾಗೃತಪ್ರಜ್ಞೆಯೇ ಅವಳಿಗೊಂದು ವಜ್ರಾಯುಧವಾಗಿ ಅವಳನ್ನು ಸರ್ವವಿಧದಿಂದಲೂ ರಕ್ಷಣೆ ಮಾಡುತ್ತದೆ. ಇದು ದಿವ್ಯತ್ರಯರಿಂದ ಉದಿಸಿಬಂದಿರುವ ವಿವೇಕವಾಣಿ.

ಶ್ರೀರಾಮಕೃಷ್ಣರ ಸಾಧನಾ ಜೀವನದಲ್ಲಿಯೇ ಮಹಿಳೆಯ ಮೂರು ಸ್ವರೂಪಗಳನ್ನೂ ಕಾಣುತ್ತೇವೆ. ರಾಣಿ ರಾಸಮಣಿ ಇಚ್ಛಾಶಕ್ತಿ ರೂಪಿಣಿಯಾದರೆ, ಭೈರವಿ ಬ್ರಾಹ್ಮಣಿ ಜ್ಞಾನಶಕ್ತಿ ರೂಪಿಣಿ ಮತ್ತು ಶ್ರೀಶಾರದಾದೇವಿಯವರು ಕ್ರಿಯಾಶಕ್ತಿ ಸ್ವರೂಪಿಣಿ. ಸರ್ವಧರ್ಮಸಮನ್ವಯದ ಮಹತ್‌ಕಾರ್ಯದಲ್ಲಿ ರಾಮಕೃಷ್ಣರಿಗೆ ಮಾನವಜಗತ್ತು ಪೂಜ್ಯಭಾವದ ವಂದನೆಯನ್ನು ಸಲ್ಲಿಸುವಂತೆಯೇ, ಸ್ತ್ರೀಯನ್ನು ಆದ್ಯಾಶಕ್ತಿಯ ಸ್ವರೂಪವಾಗಿ ಆರಾಧಿಸಿ, ಮಾಸಿಹೋಗಿದ್ದ ಅವಳ ಸ್ವರೂಪಕ್ಕೆ ವಿನೂತನ ವಿಶಿಷ್ಟಸ್ವರೂಪವನ್ನು ಕೊಟ್ಟ ಕಾರಣಕ್ಕೂ ಅವರಿಗೆ ಕೃತಜ್ಞತೆಯ ನಮನವನ್ನು ಸಲ್ಲಿಸಬೇಕಾಗುತ್ತದೆ. ಭಾರತೀಯ ಆದರ್ಶನಾರೀತ್ವವನ್ನು ಕುರಿತು ಶ್ರೀರಾಮಕೃಷ್ಣರು ಆಡಿದ ಅಂತಿಮ ಪದವೇ ಶ್ರೀಶಾರದಾದೇವಿ ಎಂಬ ಮಾತು ಅವರ ಜೀವನದ ಮುಖ್ಯ ತಿರುವುಗಳಲ್ಲಿ ಸಾಕಾರಗೊಂಡಿದೆ. ರೋಮ್ಯಾ ರೋಲಾರವರು ಹೇಳುವಂತೆ ಶ್ರೀರಾಮಕೃಷ್ಣ ಲೀಲಾನಾಟಕದಲ್ಲಿ ತಮ್ಮ ಪಾತ್ರವನ್ನು ಸ್ಪಷ್ಟವಾಗಿ ಅರಿತು ಅತ್ಯುನ್ನತವಾದ ರೀತಿಯಲ್ಲಿ ಅದನ್ನು ನಿರ್ವಹಿಸಿದ ಮಹಾಮಹಿಳೆ ಶ್ರೀಮಾತೆಯವರು. ಮುಸುಕಿನ ಮರೆಯಲ್ಲಿಯೇ ಅವರು ತಮ್ಮ ಸತ್ವವನ್ನು ಮೆರೆದವರು.

"ಸಹಧರ್ಮಿಣಿ" ಎಂಬ ಪದಕ್ಕೆ ಜ್ವಲಂತ ಸಾಕ್ಷಿಯಾಗಿ ಶ್ರೀಮಾತೆ ತಮ್ಮ ಪತಿಯೊಡನೆ ಬಾಳಿದರು. ದಕ್ಷಿಣೇಶ್ವರದ ನಹಬತ್ತಿನ ಪುಟ್ಟ ಕೋಣೆಯೇ ಅವರ ಸಾಧನಾ ಭೂಮಿಕೆಯಾಯಿತು. ಪಾತ್ರೆ, ಪರಿಕರ, ಲಟ್ಟಣಿಗೆ-ಮಣೆ, ಮಣ್ಣಿನ ಒಲೆಯೇ ಅವರ ಗುಪ್ತ ತಪಸ್ಸಿನ ಸಲಕರಣೆಗಳಾದವು. ಅಡುಗೆ ಮನೆಯೇ ಅಧ್ಯಾತ್ಮ ಕ್ಷೇತ್ರವಾಯಿತು. ಅಷ್ಟಮೂಲೆಯ ಆ ಸ್ಥಳವೇ ಅಮೃತಾನ್ನಪೂರ್ಣೇಶ್ವರಿಯ ಶ್ರೀಚಕ್ರಪೀಠವಾಯಿತು.

ಪತಿವಿಯೋಗದ ನಂತರ ವೈಧವ್ಯವನ್ನು ವ್ಯಾವಹಾರಿಕ ಲೋಕಕ್ಕಾಗಿ ಇರಿಸಿಕೊಂಡು ಅಂತರ್ಯದಲ್ಲಿ ಶ್ರೀರಾಮಕೃಷ್ಣರ ಆತ್ಮಸಂಗಾತಿಯಾಗಿಯೇ ಉಳಿದು ಶ್ರೀಮಾತೆ . ಸುಮಂಗಲಿಯಾದರು. ಬೃಂದಾವನದ ದಿವ್ಯಕ್ಷೇತ್ರದಲ್ಲಿ ಅವರಲ್ಲಿ ಆವಿರ್ಭವಿಸಿದ ಪರಮಹಂಸಭಾವವೇ ಇದಕ್ಕೆ ಪುಷ್ಟಿ ಕೊಡುತ್ತದೆ. ಮುಂದೆ ಒದಗಿದ ಕಾಮಾರ್‌ಪುಕುರದ ಏಕಾಂತವಾಸ ಒಂದು ರೀತಿಯಲ್ಲಿ ಭಗವತಿಯ ಭೂಗರ್ಭವಾಸ, ಮುಂದೆ ಲೋಕ ಕಾಣಲಿರುವ ಅಜ್ಞಾನತಮೋಹಾರಿಣಿಯ ಅಜ್ಞಾತವಾಸ. ಯಾರನ್ನೂ ಯಾವುದಕ್ಕೂ ದೇಹಿ-ಪಾಹಿ ಎನ್ನದೆ ಸಮರ್ಪಣ ಭಾವದಿಂದ ಮಹಾನಿರ್ದೇಶಕನ ಸೂಚನೆಗೆ ಕಾಯುತ್ತ ಕುಳಿತ ಪಾತ್ರಧಾರಿಣಿಯಂತೆ ಇದ್ದ ಅವರ ತಟಸ್ಥಭಾವ ಅದ್ಭುತವಾದದ್ದು.

ದಿನ ಸರಿದಂತೆ ಅವರ ದಿವ್ಯತೆ ವ್ಯಕ್ತವಾಗುತ್ತಾ ಬಂದಾಗ ಒಂದು ಕಡೆ ಅವರನ್ನು ಪೂಜ್ಯಭಾವದಿಂದ ಆದರಿಸುತ್ತಿದ್ದ ಶಿಷ್ಯರ-ಭಕ್ತರ ಸಮೂಹ, ಇನ್ನೊಂದೆಡೆ ಸ್ವಾರ್ಥಸುಖಾನುಕೂಲಕ್ಕಾಗಿ ಅವರನ್ನು ಒಂದು ಮಾಧ್ಯಮವನ್ನಾಗಿ ಬಳಸಿಕೊಳ್ಳುತ್ತಿದ್ದ ತಮ್ಮಂದಿರ ಪರಿವಾರದ ಪ್ರಾಪಂಚಿಕರ ಗುಂಪು. ಈ ಎರಡೂ ವಿರುದ್ಧ ಪರಿಸರಗಳ ನಡುವೆ ತೂಗುಯ್ಯಾಲೆಯಂತೆ ಶ್ರೀಶಾರದಾದೇವಿ ನಿರ್ಲಿಪ್ತ ಸಾಕ್ಷೀಭಾವದಿಂದ ಓಡಾಡಿದರು. ಆದರದ ಆಮಿಷಕ್ಕೂ ಒಳಗಾಗದೆ, ತಿದಿ ಒತ್ತುತ್ತಿದ್ದ ತಾಪಕ್ಕೂ ಈಡಾಗದೆ ನಡೆದುಕೊಂಡ ಅವರ ಸಮಸ್ಥಿತಿಯ ವ್ಯಕ್ತಿತ್ವ ಸರ್ವಾದರಣೀಯವಾದುದು.

ಇತಿಹಾಸದ ಪುಟಗಳಲ್ಲಿ ಸ್ತ್ರೀಯ ಮಾನವಸ್ವರೂಪ, ದೈವಸ್ವರೂಪ, ಯೋಗಿನೀಸ್ವರೂಪ ಇವು ಪ್ರತ್ಯೇಕವಾಗಿ ಕಾಣಬರುತ್ತವೆ. ಆದರೆ ಅವೆಲ್ಲದರ ಸಂಗಮಸ್ವರೂಪವಾಗಿ ಶ್ರೀಮಾತೆ ಬಾಳಿದ್ದಾರೆ. ಕಾಶೀಪುರದ ತೋಟದ ಮನೆಯಲ್ಲಿ ಶ್ರೀರಾಮಕೃಷ್ಣರ ಅಂತಿಮ ದಿನಗಳಲ್ಲಿ ಪತಿಯ ಊಟಕ್ಕೆ ಅಣಿಮಾಡಿ ಅರೆಸಮಾಧಿಸ್ಥಿತಿಯಲ್ಲಿದ್ದ ಅವರನ್ನು ಎಚ್ಚರಿಸಿದಾಗ ಶ್ರೀಮಾತೆಯವರನ್ನು ಕುರಿತು ಶ್ರೀರಾಮಕೃಷ್ಣರು ಹೇಳಿದರು, "ನೋಡು, ಮಾನವ ಜೀವಿಗಳು ಕ್ರಿಮಿಗಳಂತೆ ಕತ್ತಲಲ್ಲಿ ತೊಳಲುತ್ತಿದ್ದಾರೆ. ಅವರ ಏಳಿಗೆಗೆ ನೀನು ಏನಾದರೂ ಮಾಡುವುದಿಲ್ಲವೆ?" ಶ್ರೀಮಾತೆಯವರು ನನ್ನಿಂದಾದೀತೆ? ಎಂದು ಸಂಕೋಚವನ್ನು ವ್ಯಕ್ತಪಡಿಸಿದಾಗ, "ಏಕೆ ಈ ಶರೀರದಿಂದ ಏನು ಸಾಧಿತವಾಯ್ತೊ ಅದಕ್ಕಿಂತ ಹೆಚ್ಚಿನದೇ ನಿನ್ನಿಂದ ಸಾಧ್ಯ, ನಾನೊಬ್ಬನೇ ಶ್ರಮಿಸಬೇಕೆ? ನೀನೂ ಶ್ರಮಿಸಬೇಡವೆ?" ಎಂದರು ಶ್ರೀರಾಮಕೃಷ್ಣರು. ಈ ಮಾತುಗಳು ಇವರಿಬ್ಬರೂ ಒಂದೇ ಭಗವತ್‌ಸ್ವರೂಪದ ಎರಡು ಮುಖಗಳು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಅಷ್ಟೇ ಅಲ್ಲದೆ ಇಂದಿಗೂ ತನ್ನ ಆತ್ಮಶಕ್ತಿಯಲ್ಲಿ ತನಗೇ ನಂಬಿಕೆ ಇಲ್ಲದೆ ತೊಳಲುವ ಯಾವ ಸ್ತ್ರೀಗೆ ಆದರೂ ಇದು ಶಕ್ತಿಸಂಚಾರವನ್ನುಂಟುಮಾಡುತ್ತದೆ.

ಶ್ರೀಶಾರದಾದೇವಿಯವರ ಜೀವನದ ಮುಖ್ಯ ತಿರುವುಗಳಲ್ಲಿ ಹುದುಗಿರುವ ನಿಗೂಢ ರಹಸ್ಯಗಳು ಅರಿವಾದರೆ ಅವರ ದಿನನಿತ್ಯದ ನಡೆನುಡಿಗಳಲ್ಲಿನ ಮಹತ್ತು ತಾನೇ ಅರಿವಾಗುತ್ತದೆ. ಪುಟ್ಟಹಳ್ಳಿಯ ಅನಕ್ಷರಸ್ಥಳಾದ ಈ ಮುಗ್ಧಮಹಿಳೆ ಇಂದಿನ ಆಧುನಿಕ ನಾರೀ ಪರಿವಾರಕ್ಕೆ ಏನುತಾನೇ ನೀಡಬಲ್ಲಳು? ಯಾವ ಆದರ್ಶವನ್ನು ತಾನೇ ಮುಂದಿಡಬಲ್ಲಳು ಎನ್ನುವ ಆಲೋಚನೆ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಾಗಿ ಮತ್ತು ಆಶ್ಚರ್ಯಚಿಹ್ನೆಯಾಗಿ ಒಂದರ ಹಿಂದೊಂದು ಬರಬಹುದು. ಆದರೆ ಶ್ರೀಮಾತೆಯವರ ನಿಜಸ್ವರೂಪ ಒಳಗಣ್ಣಿಗೆ ಗೋಚರವಾದಾಗ ಅದ್ಭುತ ಕಂಡಂತೆ ಆಶ್ಚರ್ಯ ಚಿಹ್ನೆಯೊಂದೇ ಉಳಿಯುತ್ತದೆ.

> **ಬದುಕಿನ ಏರಿಳಿತಗಳನ್ನು, ಬೇಗೆ ಬವಣೆಗಳನ್ನು ಸಮರ್ಪಣ ಭಾವದಿಂದ, ಸಾಕ್ಷೀಭಾವದಿಂದ ಹೇಗೆ ಎದುರಿಸಿ ನಿಲ್ಲಬಹುದು ಎಂಬ ಸತ್ಯವನ್ನು ಶ್ರೀಮಾತೆಯವರು ಕಾಣಿಸಿದ್ದಾರೆ.**

ಸಹಧರ್ಮ, ಸಹಯೋಗ, ಸಹಬಾಳ್ವೆ ಈ ಮೂರರ ಹಿರಿಮೆಯನ್ನು ಸತಿಯಾಗಿ ಅವರು ಬಾಳಿತೋರಿಸಿದ್ದಾರೆ. ವಿರುದ್ಧ ಪರಿಸರದಲ್ಲಿ ಅತ್ಯಂತ ಪರಿಮಿತ ವಲಯದಲ್ಲಿ ಕಂಡೂ ಕಾಣದಂತೆ ಹೇಗೆ ಸತ್ವಪೂರ್ಣವಾದ ಜೀವನವನ್ನು ನಡೆಸಬಹುದು ಎಂಬ ಆದರ್ಶವನ್ನು ಮುಂದಿರಿಸಿದ್ದಾರೆ. ಬದುಕಿನ ಏರಿಳಿತಗಳನ್ನು, ಬೇಗೆ ಬವಣೆಗಳನ್ನು ಸಮರ್ಪಣಭಾವದಿಂದ, ಸಾಕ್ಷೀಭಾವದಿಂದ ಹೇಗೆ ಎದುರಿಸಿ ನಿಲ್ಲಬಹುದು ಎಂಬ ಸತ್ಯವನ್ನು ಕಾಣಿಸಿದ್ದಾರೆ.

ಇಂದಿನ ಆಧುನಿಕ ಮಹಿಳೆ ಪದವೀಧರಳಾಗಿ, ಉದ್ಯೋಗಸ್ಥಳಾಗಿ ಹಿರಿಯ ಪದವಿಗಳಲ್ಲಿ ಆಸೀನಳಾಗಿದ್ದಾಳೆ. ಸ್ವಾತಂತ್ರ್ಯ, ಸಮಾನತೆ ಇವುಗಳಿಗೆಲ್ಲ ತನ್ನದೇ ಆದ ಅರ್ಥ ಕಲ್ಪಿಸಿಕೊಂಡಿದ್ದಾಳೆ. ಪ್ರಾಚೀನತೆಯಲ್ಲಿ ಸತ್ವಕಾಣದೆ ಆಧುನಿಕತೆಗೆ ಪುಷ್ಟಿ ನೀಡಲಾಗದೆ ಮಧ್ಯಂತರ ಸ್ಥಿತಿಯಲ್ಲಿ ನಲುಗಿದ್ದಾಳೆ. ಗಾರ್ಗಿ, ಮೈತ್ರೇಯಿಯರು ಒಂದು ಕಾಲದಲ್ಲಿ ಇದ್ದು ಆಗಿಹೋದವರಲ್ಲ, ಸೀತಾಸಾವಿತ್ರಿಯರದು ಮುಗಿದ ಕಥೆಯಲ್ಲ. ವೇದಕಾಲದ ವನಿತೆಯ ಆಧ್ಯಾತ್ಮಿಕ ಪ್ರಭೆ, ಸೀತೆಯ ನಿಷ್ಠೆ, ಸಹನೆ, ಸಾವಿತ್ರಿಯ ಯೌಗಿಕ ಇಚ್ಛಾಶಕ್ತಿ ಇವೆಲ್ಲ ಯಾವ ಮಹಿಳೆಯೇ ಆಗಲಿ ಯಾವ ಕಾಲಕ್ಕೇ ಆಗಲಿ ಮೈಗೂಡಿಸಿಕೊಂಡು ಬಾಳಿ ಬೆಳಗಬೇಕಾದ ಆದರ್ಶಗಳು.

ಈ ದಿಶೆಯಲ್ಲಿ ಸ್ವಾಮಿ ವೀರೇಶ್ವರಾನಂದರ ಮಾತುಗಳನ್ನು ಇಲ್ಲಿ ನೆನೆಯುವುದು ಸೂಕ್ತವೆನ್ನಿಸುತ್ತದೆ. : "ಆಧುನಿಕತೆ ಮತ್ತು ಸಮಾನತೆಯ ಉದ್ವೇಗದಲ್ಲಿ ಮಹಿಳೆ ತನ್ನ ಸ್ತ್ರೀತ್ವದ ಹಿರಿಮೆಯಿಂದ ದೂರವಾಗುವಂತಿಲ್ಲ. ಸನಾತನಧರ್ಮದ ಶ್ರೇಷ್ಠತೆಯ ಉಳಿವಿಗೆ ಅವಳೇ ಭದ್ರ ಬುನಾದಿ. ಸತೀತ್ವದ ಪರಿಪಕ್ವರೂಪವೇ ಮಾತೃತ್ವ. ಪರಿಪೂರ್ಣ ಸ್ತ್ರೀತ್ವವೇ ಸ್ತ್ರೀಗೆ ಭೂಷಣ, ಪುರುಷನಂತಾಗುವುದರಲ್ಲಲ್ಲ. ಸ್ತ್ರೀತ್ವ ಅಳಿದುಹೋದರೆ ಮಾತೃತ್ವವೇ ಇಲ್ಲವಾಗುತ್ತದೆ, ಲೋಕದಲ್ಲಿ ಮಾನವತೆಯೂ ಅಳಿದು ಹೋಗುತ್ತದೆ. ಇಂದು ಅವಳಲ್ಲಿನ ಚೈತನ್ಯಶಕ್ತಿ ಅನುಚಿತವಾದ ಮಾಧ್ಯಮಗಳಲ್ಲಿ ಸಂಚಾಲಿತವಾಗುತ್ತಿದೆ, ಹಾಗಾಗಬಾರದು. ಶಿವಶಕ್ತಿಸ್ವರೂಪಗಳ ವಿಶಿಷ್ಟತೆ ಉಳಿದರೆ ಲೋಕಕ್ಕೆ ಹಿತ.

> **ಶ್ರೀಮಾತೆ ಶಾರದಾದೇವಿಯವರು ಮಾನವನ ಪ್ರಜ್ಞಾ ದಿಗಂತದಲ್ಲಿ ನಿರಂತರವೂ ಬೆಳಗುತ್ತಿರುವ ದಿವ್ಯಪ್ರಭಾಮಂಡಲ.**
> — *ಸ್ವಾಮಿ ವೀರೇಶ್ವರಾನಂದ*

ಒಂದರ ಹಿರಿಮೆಗೆ ಇನ್ನೊಂದರ ಹಿರಿಮೆ ಪೂರಕವಾಗಬೇಕು; ಕೊಡುಗೆಯಾಗಬೇಕು. ಈ ಸತ್ಯವನ್ನು ಪುನಶ್ಚೇತನಗೊಳಿಸಿದವರು ಶ್ರೀಮಾತೆ ಶಾರದಾದೇವಿ. ಮಾನವನ ಪ್ರಜ್ಞಾದಿಗಂತದಲ್ಲಿ ನಿರಂತರವೂ ಬೆಳಗುತ್ತಿರುವ ದಿವ್ಯಪ್ರಭಾಮಂಡಲ ಅವರು."

ಯತಿವರ್ಯರ ಎಚ್ಚರದ ಈ ಮಾತುಗಳು ಸ್ತ್ರೀತ್ವದ ನಿಜವಾದ ಔನ್ನತ್ಯವನ್ನು ಎತ್ತಿಹಿಡಿದು ಅದನ್ನು ಉಳಿಸಿ, ಬೆಳೆಸಿ, ಬೆಳಗಿಸಿಕೊಳ್ಳಬೇಕಾದ ಹೊಣೆಯತ್ತ ಅವಳಿಗೆ ಕೈಮಾಡಿ ತೋರಿಸಿದೆ. ಸ್ತ್ರೀ ಯಾವ ಹಿರಿಯ ಕ್ಷೇತ್ರಗಳಲ್ಲಿ ಎಷ್ಟೇ ಉತ್ತಮ ಸ್ಥಾನದಲ್ಲಿರಲಿ, ಏನೆಲ್ಲ ಸಾಮಾಜಿಕ ಪ್ರಗತಿ ಸಾಧಿಸಿರಲಿ, ಅಲ್ಲೆಲ್ಲ ಸ್ತ್ರೀತ್ವದ ಕಾಂತಿಧಾರೆಯನ್ನು ಹರಿಸದೆ ಇರುವುದು ಉಚಿತವಲ್ಲ. ಅದು ಅಗತ್ಯ, ಅನಿವಾರ್ಯ. ಆಗಲೇ ನಾರೀತ್ವ ಬಲಿಷ್ಠವಾಗಿ ನಿಲ್ಲಬಲ್ಲದು.

ಸೋದರಿ ನಿವೇದಿತಾ ಮತ್ತು ಶ್ರೀಮಾತೆಯವರ ದಿವ್ಯ ಬಾಂಧವ್ಯವು ಪ್ರಾಚೀನತೆ ಮತ್ತು ಆಧುನಿಕತೆಯ ಸಮರಸ ಸಂಗಮ. ಒಂದೆಡೆ ಆಧುನಿಕತೆ ಪ್ರಾಚೀನತೆಯನ್ನು ಪೂಜಿಸಿ ಗೌರವಿಸಿದೆ, ಮತ್ತೊಂದೆಡೆ ಪ್ರಾಚೀನತೆ ಆಧುನಿಕತೆಯನ್ನು ಪ್ರೀತಿವಾತ್ಸಲ್ಯದಿಂದ ಆದರಿಸಿದೆ. 'ಶ್ರೀಮಾತೆ ಪ್ರಾಚೀನತೆಯ ಅಂತಿಮ ಅಧ್ಯಾಯವೇ? ಅಥವಾ ಆಧುನಿಕತೆಯ ಮೊದಲ ಅಧ್ಯಾಯವೇ?' ಎಂಬ ಸಂಶಯ ತಲೆದೋರಿದಾಗ ಅವರು ಅವೆರಡರ ಸಂಬಂಧಸೇತುವಾಗಿ ಕಾಣುತ್ತಾರೆ. ಇಂದಿನ ಸ್ತ್ರೀ ತನ್ನ ಹೊಸ ಪಾತ್ರವನ್ನು ಹೊಸ ರೀತಿಯಲ್ಲಿಯೇ ನಿರ್ವಹಿಸುತ್ತಿದ್ದಾಳೆಯೇ ಅಥವಾ ಹಳೆಯ ಪಾತ್ರವನ್ನು ಹೊಸರೀತಿಯಲ್ಲಿ ನಿರ್ವಹಿಸುತ್ತಿದ್ದಾಳೆಯೇ? ಎಂದು ಆಧುನಿಕ ಚಿಂತನಶೀಲ ಲೇಖಕಿಯರಲ್ಲಿ ಖ್ಯಾತರಾದ ಶ್ರೀಮತಿ ಚೇತನಾ ಮಾಂಡವೀಯಾ ಅವರು ಪ್ರಶ್ನಿಸಿದ್ದಾರೆ. ಆಧ್ಯಾತ್ಮಿಕ ತಹಳದಿ ಇಲ್ಲದ ತೀಕ್ಷ್ಣ ಬುದ್ಧಿ, ಹದವರಿಯದ ಭಾವನೆಗಳು, ಚಿತ್ತಶುದ್ಧಿ ಇಲ್ಲದ ಚಿಂತನೆಗಳು ಅವಳನ್ನು ಎಲ್ಲಿಗೊಯ್ಯುತ್ತಿವೆ ಎಂದು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಎಲ್ಲ ದೋಷಗಳಿಂದ ಮುಕ್ತವಾಗಿ ತನ್ನ ಸ್ವಸ್ವರೂಪವನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳುವುದೇ ಸ್ವಾತಂತ್ರ್ಯದ ನಿಜವಾದ ಅರ್ಥ. ಒಬ್ಬರ ಮನೋಧರ್ಮವನ್ನು ಇನ್ನೊಬ್ಬರು ಅರಿತು ಆದರಿಸುವುದೇ, ಸಹಕರಿಸುವುದೇ ಸಮಾನತೆ ಎಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮಾತೆಯವರ ಉನ್ನತ ವ್ಯಕ್ತಿತ್ವದ ಉಜ್ವಲ ಕಾಂತಿಗೆ ಅವರ ಮನಸ್ಸು ಮಾರುಹೋಗಿದೆ. "ತಮ್ಮ ಸಹಜ ಸರಳ ಭಾವದಲ್ಲಿ, ಮಾನವೀಯತೆಯ ಚೌಕಟ್ಟಿನಲ್ಲಿ ನಿಂತು ತಪೋಮಯವಾದ ವರ್ಚಸ್ಸಿನಿಂದ ವಿಶ್ವಮಾತೃತ್ವದ ಪಂಜನ್ನು ಎತ್ತಿಹಿಡಿದು ಬೆಳಗುತ್ತಿರುವ ಮಹಾಮಹಿಳೆ" ಎಂದು ಅವರಿಗೆ ಕೈಜೋಡಿಸಿ ಭಕ್ತಿಯಿಂದ ನಮಿಸಿದ್ದಾರೆ.

ಸನಾತನ ಸ್ತ್ರೀಪರಂಪರೆಯ ಸಾರವಾಗಿ ಆಧುನಿಕ ಸ್ತ್ರೀಸಮೂಹಕ್ಕೆ ಸ್ಫೂರ್ತಿಯ ಸೆಲೆಯಾಗಿ ವಿಶ್ವಮಾತೃತ್ವದ ಮೂರ್ತಸ್ವರೂಪರಾಗಿ ಶ್ರೀಮಾತೆ ಶಾರದಾದೇವಿ ಸರ್ವವಂದಿತೆಯಾಗಿದ್ದಾರೆ. ❖

## ಶ್ರೀಮಾತೆಯವರಿಗೆ ಸೋದರಿ ನಿವೇದಿತಾರವರ ಒಂದು ಪತ್ರ



*ಸೋದರಿ ನಿವೇದಿತೆಯೊಡನೆ ಶ್ರೀಮಾತೆಯವರು*

**ಪರಮ ಪ್ರೀತಿಯ ತಾಯಿ,**

**ನಾವೆಲ್ಲ ಸೇರಿ ನಿಮ್ಮ ಮೇಲೊಂದು ಸುಂದರ ಸ್ತೋತ್ರವನ್ನು ರಚಿಸಿ ನಿಮಗೆ ಕಳಿಸಿಕೊಡಬೇಕು ಎಂದು ನನ್ನಾಸೆ. ಆದರೆ ಅದೂ ಕೂಡ ಬಹಳ ಗಲಾಟೆ, ಅತಿಯಾದ ಸದ್ದು ಗದ್ದಲ ಎಂದೆನಿಸುತ್ತದೆ ನನಗೆ. ನಿಜಕ್ಕೂ ನೀವು ಭಗವಂತನ ಒಂದು ಅದ್ಭುತ ಕೃತಿಯೇ ಸರಿ. ಶ್ರೀರಾಮಕೃಷ್ಣರು ಈ ಜಗತ್ತಿಗೆ ನೀಡಿದ ಅವರ ಪ್ರೇಮದ ಮಧುಕಲಶವೇ ನೀವು! ಶ್ರೀರಾಮಕೃಷ್ಣರು ಈ ಜಗತ್ತಿನ ದಿಕ್ಕಿಲ್ಲದ ಮಕ್ಕಳಿಗಾಗಿ ಬಿಟ್ಟುಹೋದ ಬಳುವಳಿ ನೀವು! ನಿಮ್ಮ ಮುಂದೆ ನಾವೆಲ್ಲ ಸದಾ ಶಾಂತವಾಗಿರಬೇಕು, ಮೌನದಿಂದಿರಬೇಕು- ಹಾಗಿದೆ ನಿಮ್ಮ ಜೀವನ. ನಿಜಕ್ಕೂ ಭಗವಂತನ ಅದ್ಭುತ ನಿರ್ಮಿತಿಗಳೆಲ್ಲ ತುಂಬ ಶಾಂತ, ತುಂಬ ಮೌನ: ಬೀಸುವ ಮಂದಾನಿಲ, ಬೆಳಕು ನೀಡುವ ಸೂರ್ಯಕಿರಣ, ಹೂದೋಟದ ಕಂಪು, ಗಂಗೆಯ ತಂಪು- ಎಲ್ಲವೂ ಶಾಂತ, ಮೌನ! ಇವು ಮೌನವಾಗಿಯೇ ನಮ್ಮ ಹೃದಯದೊಳಗೆ ಸದ್ದಿಲ್ಲದೆ ಕದ್ದು ಪ್ರವೇಶ ಮಾಡಿಬಿಡುತ್ತವೆ. ಈ ವಸ್ತುಗಳೆಲ್ಲ ನಿಮ್ಮ ಹಾಗೆಯೇ ತುಂಬ ಶಾಂತ, ತುಂಬ ನೀರವ! ...**

— ನಿಮ್ಮ ಮಗು,
ನಿವೇದಿತಾ